■ ಹನಿ



## ನೃತ್ಯಗಾತಿಯ ನೋವು

ನೃತ್ಯ– ಸಂಗೀತದ ಬಗ್ಗೆ ಆಸಕ್ತಿ ಇರುವವರಿಗೆ ಪರಿಚಿತ ಹೆಸರು ಇಲಿಯಾನಾ ಸಿಟರಿಸ್ಟಿ. ಹೆಸರಾಂತ ಒಡಿಸ್ಸಿ ನೃತ್ಯಗಾತಿಯಾಗಿ ಪ್ರಸಿದ್ಧರಾಗಿರುವ ಇಲಿಯಾನ ಮೇಲೆ ಇತ್ತೀಚೆಗೆ ಪುರಿ ಜಗನ್ನಾಥ ದೇವಾಲಯದ ಆವರಣದಲ್ಲಿ ಹಲ್ಲೆ ನಡೆದಿದೆ. ಹಲ್ಲೆ ನಡೆಸಿದ ಅರ್ಚಕರಿಬ್ಬರು ಅವರ ವಿದೇಶಿ ಮೂಲವನ್ನೂ ಎತ್ತಿಹಿಡಿದು ಹಂಗಿಸಿದ್ದಾರೆ. ಹಲ್ಲೆಗೆ ಕಾರಣ ಆಕೆ ಲಂಚ ನೀಡಲು ಒಪ್ಪದಿದ್ದುದು ಎನ್ನುವುದು ಅಲ್ಲಿಯ ಅವ್ಯವಸ್ಥೆಗೆ ಹಿಡಿದ ಕೈಗನ್ನಡಿ. ದೇವಾಲಯದ ಆಡಳಿತ ಈ ಹಲ್ಲೆಯನ್ನು ಖಂಡಿಸಿದ್ದು, ಕ್ರಮ ಕೈಗೊಳ್ಳುವ ಭರವಸೆ ನೀಡಿದೆ.

ಇಟಲಿಯ ಕ್ರಿಶ್ಚಿಯನ್ ಡೆಮಾಕ್ರಾಟಿಕ್ ಪಕ್ಷದ ಹಿರಿಯ ರಾಜಕಾರಣಿ ಸೆವರಿನೊ ಸಿಟರಿಸ್ಟಿಯ ಮಗಳು ಇಲಿಯಾನಾ ಬಾಲ್ಯದಲ್ಲೇ ನಟನೆಯ ಬಗ್ಗೆ ಆಸಕ್ತಿ ಹೊಂದಿದ್ದಾಕೆ. ಇಟಲಿಯ ಸಾಂಪ್ರದಾಯಿಕ ಮತ್ತು ಪ್ರಯೋಗಾತ್ಮಕ ರಂಗಭೂಮಿಯಲ್ಲಿ ನಟಿಯಾಗಿ ಹೆಸರು ಮಾಡಿದಾಕೆ. ಕಥಕ್ಕಳಿ ಕಲಿಯಲೆಂದು ಮೊದಲು ಬಂದದ್ದು ಕೇರಳಕ್ಕೆ. ಕಥಕ್ಕಳಿ ಕಲಿಸಿದ ಗುರು ಕೃಷ್ಣನ್ ನಂಬೂದಿರಿ ಒಡಿಸ್ಸಾಕ್ಕೆ ತೆರಳಲು ಸಲಹೆ ನೀಡಿದರು. ಗುರು ಕೇಳುಚರಣ್ ಮಹಾಪಾತ್ರರ ಶಿಷ್ಯತ್ವ ಇಲಿಯಾನಾರ ನಾಟ್ಯಪ್ರತಿಭೆಯನ್ನು ಎತ್ತರಕ್ಕೇರಿಸಿತು. 79ರಿಂದಲೂ ಪುರಿಯಲ್ಲಿ ನೆಲೆಸಿರುವ ಇಲಿಯಾನಾ, ಮಯೂರ್‌ಭಂಜ್ ಚವು ನೃತ್ಯಪ್ರಕಾರದಲ್ಲಿ ಎತ್ತಿದ ಕೈ. ಅದಕ್ಕಾಗಿಯೇ ಭುವನೇಶ್ವರದ ಸಂಗೀತ ಮಹಾವಿದ್ಯಾಲಯ ಆಕೆಗೆ 'ಆಚಾರ್ಯ' ಪದವಿ ನೀಡಿದೆ. ಪೌರ್ವಾತ್ಯ ಪುರಾಣಗಳ ಬಗ್ಗೆ ಡಾಕ್ಟರೇಟ್ ಪಡೆದಿರುವ ಇಲಿಯಾನ, 94ರಲ್ಲಿ ಸ್ವಂತ ನೃತ್ಯಶಾಲೆ ತೆರೆದರು. 96ರಲ್ಲಿ ಆಕೆ ಸ್ಥಾಪಿಸಿದ ಆರ್ಟ್ ವಿಷನ್ ಅಕಾಡೆಮಿ, ನೃತ್ಯ, ಸಂಗೀತ, ರಂಗಭೂಮಿ ಮತ್ತು ಚಿತ್ರಕಲೆಯ ಪ್ರಮುಖರ ಚರ್ಚೆಗೆ ವೇದಿಕೆ ಒದಗಿಸುತ್ತಿದೆ. ದೇಶ ವಿದೇಶಗಳಲ್ಲಿ ಕಾರ್ಯಕ್ರಮ ನೀಡಿರುವ ಆಕೆಯ ಬಹುತೇಕ ಎಲ್ಲ ಪ್ರದರ್ಶನಗಳಲ್ಲೂ ಪೂರ್ವ–ಪಶ್ಚಿಮದ ನೃತ್ಯಸಂಗಮ ಎದ್ದು ಕಾಣುತ್ತದೆ.

ಸಿನಿಮಾದಲ್ಲೂ ಇಲಿಯಾನ ಕೆಲಸ ಮಾಡಿದ್ದಾರೆ. ಅಪರ್ಣ ಸೇನ್ ನಿರ್ದೇಶನದ 'ಯುಗಾಂತ್' ಚಿತ್ರದಲ್ಲಿ ಇಲಿಯಾನರ ಕೊರಿಯೊಗ್ರಫಿಗೆ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ. ಎಂ.ಎಫ್.ಹುಸೇನ್‌ರ 'ಮೀನಾಕ್ಷಿ– ಎ ಟೇಲ್ ಆಫ್ ಥ್ರೀ ಸಿಟೀಸ್' ಮತ್ತು ಗೌತಮ್ ಘೋಷ್‌ರ 'ಅಬಾರ್ ಅರಣ್ಯೆ' ಸಿನಿಮಾಗಳಿಗೂ ಈಕೆಯದ್ದೇ ಕೊರಿಯೊಗ್ರಫಿ. ಕೇಳುಚರಣ್ ಮಹಾಪಾತ್ರರ ಜೀವನ– ಸಾಧನೆಯ ಬಗ್ಗೆ ಈಕೆ ಬರೆದಿರುವ 'ದಿ ಮೇಕಿಂಗ್ ಆಫ್ ಗುರು' ಪುಸ್ತಕ ಅತ್ಯಂತ ಜನಪ್ರಿಯ. ಒರಿಸ್ಸಾದ ಸಮರಕಲೆಗಳ ಬಗ್ಗೆಯೂ ಇನ್ನೊಂದು ಪುಸ್ತಕ ಬರೆದಿರುವ ಇಲಿಯಾನಗೆ, 2006ರಲ್ಲಿ ಭಾರತ ಸರಕಾರ 'ಪದ್ಮಶ್ರೀ' ನೀಡಿ ಗೌರವಿಸಿದೆ. ಭಾರತೀಯ ಸಂಸ್ಕೃತಿಯನ್ನು ಅಳವಡಿಸಿಕೊಂಡು ಬಾಳುತ್ತಿರುವ ಇಲಿಯಾನ ಮೇಲಿನ ಹಲ್ಲೆ ನಮ್ಮವರ ಅಪ–ಸಂಸ್ಕೃತಿಯ ಸೂಚಕವೂ ಹೌದು.



## ದುಬಾರಿ ಆಟಗಾರ

ಬಾಸ್ಕೆಟ್‌ಬಾಲ್ ಪ್ರಿಯನಾಗಿದ್ದ ಮಗನನ್ನು 'ಬಿಸಿಲಲ್ಲಿ ಆಟವಾಡಿ ಬಳಲುವುದು ಬೇಡ' ಎಂದು ಅಮ್ಮ ತಡೆದದ್ದರಿಂದಲೇ ಆತ ಬ್ಯಾಡ್ಮಿಂಟನ್ ಆಡತೊಡಗಿದ. ಆಟಕ್ಕೆ ಕುದುರುತ್ತಾ ಮೇಲಕ್ಕೇರಿದ– ವಿಶ್ವದ 'ನಂಬರ್ ಒನ್' ಬ್ಯಾಡ್ಮಿಂಟನ್ ಆಟಗಾರನಾದ! ಈತ ಮಲೇಷ್ಯಾದ ಲೀ ಚಾಂಗ್ ವೀ. ಕಳೆದ ವಾರ 'ಇಂಡಿಯನ್ ಬ್ಯಾಡ್ಮಿಂಟನ್ ಲೀಗ್' ಹರಾಜಿನಲ್ಲಿ ಲೀ ವೀ ಗೆ ಎಲ್ಲಿಲ್ಲದ ಡಿಮ್ಯಾಂಡು. ಮುಂಬೈ ಮಾಸ್ಟರ್ಸ್ ಮತ್ತು ಬೆಂಗಳೂರಿನ ಬಂಗಾ ಬೀಟ್ಸ್ ಎರಡೂ ತಂಡಗಳು ಪೈಪೋಟಿಗೆ ಬಿದ್ದು ಲೀ ವೀ ಯ ದರವನ್ನು ಏರಿಸಿದವು. ಕೊನೆಗೆ 80.19 ಲಕ್ಷ ರೂಪಾಯಿಗೆ ಲೀ ವೀ ಮುಂಬೈ ಪಾಲಾದ. ನಮ್ಮ ಚಾಂಪಿಯನ್ ಸೈನಾಗಿಂತಲೂ ತುಂಬಾ ದುಬಾರಿ!

11ರ ಹರೆಯದ ಲೀ ವೀ ಅಪ್ಪನ ಜತೆಗೆ ಬಂದು ಬ್ಯಾಡ್ಮಿಂಟನ್ ಆಡುತ್ತಿದ್ದುದನ್ನು ನೋಡಿದ ಕೋಚ್, ಅಚ್ಚರಿಯಿಂದ ಬಳಿಗೆ ಕರೆದದ್ದೇ ಬದುಕಿಗೊಂದು ತಿರುವು ಕೊಟ್ಟಿತು. 'ಈತನಲ್ಲಿ ಪ್ರತಿಭೆ ಇದೆ. ನನ್ನ ಬಳಿಗೆ ಕಳಿಸಿ' ಎಂದು ಅವತ್ತು ಕೋಚ್‌ನಿಂದ ಶಹಬ್ಬಾಸ್ ಪಡೆದ ಲೀ ವೀ, 17ರ ಹರೆಯದಲ್ಲೇ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಗಿಟ್ಟಿಸಿದ! ಮಲೇಷ್ಯಾವನ್ನು ಒಲಿಂಪಿಕ್ಸ್ ಪದಕ ಪಟ್ಟಿಯಲ್ಲಿ ಪದೇ ಪದೇ ಕೂರಿಸಿದ. 2006ರಲ್ಲಿ ಕಾರು ಅಪಘಾತಕ್ಕೆ ಸಿಕ್ಕು, ತಲೆಗೆ ಆರು ಹೊಲಿಗೆಗಳನ್ನು ಹಾಕಿಸಿಕೊಂಡರೂ ಛಲ ಬಿಡಲಿಲ್ಲ. 2008, 2012ರಲ್ಲಿ ಎರಡೂ ಬಾರಿ ಒಲಿಂಪಿಕ್ಸ್ ಬೆಳ್ಳಿ ಪದಕ ಗೆದ್ದ. 2008ರ ಆಗಸ್ಟ್‌ನಿಂದ 2012ರ ಜೂನ್‌ವರೆಗೆ ಸತತವಾಗಿ ವಿಶ್ವ ರ‍್ಯಾಂಕಿಂಗ್‌ನಲ್ಲಿ 'ನಂಬರ್ ಒನ್' ಆಗಿ ಹೊಸ ದಾಖಲೆ ಬರೆದ. ಲೀ ವೀಯ ಪ್ರೀತಿಯದ್ದೂ ಸಿನಿಮಾ ಕಥೆಯೇ. ಸಹ ಆಟಗಾರ್ತಿ ವಾಂಗ್ ವೀಮ್ ಚೂ ಜತೆಗೆ 'ಕೂಡಿಕೆ' ಮಾಡಿಕೊಂಡಿದ್ದ ಲೀ, ಜಗಳವಾಡಿ 2009ರಲ್ಲಿ ಪ್ರತ್ಯೇಕವಾದ. 2012ರಲ್ಲಿ ಮತ್ತೆ ಪ್ರೀತಿ ಚಿಗುರಿತು, ಇಬ್ಬರೂ ಮದುವೆಯೇ ಆದರು! ಈಗ ಒಂದು ಮಗುವೂ ಇದೆ. 'ಡೇರ್ ಟು ಬಿ ಎ ಚಾಂಪಿಯನ್' ಎನ್ನುವ ಈತನ ಆತ್ಮಚರಿತ್ರೆ ಓದಿದರೆ ಇನ್ನಷ್ಟು ಕಥೆಗಳು ಸಿಗುತ್ತವೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65